Language and Literacy

TESS India

# Using local resources

## ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಠಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್  ಇಂಡಿಯಾ -OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ 'ವಿದ್ಯಾರ್ಥಿ' ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER  ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ  ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು - ಒಳಗೊಂಡಿದೆ.  ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0     LL10TESSKNV1*

*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಈ ಘಟಕದಲ್ಲಿ, ಭಾಷೆ ಮತ್ತು ಸಾಕ್ಷರತೆಯ ತರಗತಿಯಲ್ಲಿ, ಸುಲಭವಾಗಿ ದೊರಕುವ ಸ್ಥಳೀಯ ಸಂಪನ್ಮೂಲಗಳನ್ನು ಪಠ್ಯಪುಸ್ತಕಕ್ಕೆ ಪೂರಕವಾಗಿ ಬಳಸುವ ರೀತಿಗಳನ್ನು ಅನ್ವೇಷಿಸುವಿರಿ. ಈ ಸಂಪನ್ಮೂಲಗಳ ಅನುಕೂಲತೆ ಏನೆಂದರೆ - ಪರಿಸದಲ್ಲಿರುವ ಬರವಣಿಗೆಯನ್ನು ಪರಿಶೀಲಿಸುವುದು, ಸಮುದಾಯದ ಸದಸ್ಯರೊಂದಿಗೆ ಮಾತನಾಡುವುದು, ಅವರು ಹೇಳುವುದನ್ನು ಕೇಳಿಸಿಕೊಳ್ಳುವುದು ಅಥವಾ ಚರ್ಚೆ ಹುಟ್ಟುಹಾಕಲು ಸಮುದಾಯವನ್ನು ಬಳಸುವುದು - ಇವೆಲ್ಲವೂ ವಿಶ್ವಾಸಾರ್ಹ ಸಂಪನ್ಮೂಲಗಳನ್ನು ಪ್ರತಿನಿಧಿಸುತ್ತವೆ ಮತ್ತು ಇನ್ನಷ್ಟು ಸಂಪನ್ಮೂಲಗಳನ್ನು ಹುಟ್ಟುಹಾಕುತ್ತವೆ.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಮ್ಮ ಸುತ್ತಲೂ ಉಚಿತವಾಗಿ ಸಿಗುವ ಮುದ್ರಿತ ವಸ್ತುಗಳನ್ನು ಭಾಷಾ ಅರಿವಿನ ಚಟುವಟಿಕೆಗಳಿಗೆ ಆಧಾರ ಸಾಮಗ್ರಿಯಾಗಿ ಬಳಸುವುದು ಹೇಗೆಂದು ತಿಳಿಯಬಹುದು
- ತರಗತಿಗೆ ಅತಿಥಿಯಾಗಿ ಬಂದವರ ಭೇಟಿಯನ್ನು ಆಧರಿಸಿ ಪಾಠ ಸರಣಿಯನ್ನು ಯೋಜಿಸುವ ಬಗ್ಗೆ ತಿಳಿಯಬಹುದು
- ವಿದ್ಯಾರ್ಥಿಯ ಶಾಲಾ ಪಯಣವನ್ನು ಸಂಪನ್ಮೂಲವಾಗಿ ಬಳಸಿ ಭಾಷೆ ಮತ್ತು ಸಾಕ್ಷರತೆಯ ಕೌಶಲಗಳನ್ನು ಅಭಿವೃದ್ಧಿ ಪಡಿಸುವುದು ಹೇಗೆಂದು ತಿಳಿಯಬಹುದು

## ಈ ಮಾರ್ಗವೇಕೆ ಮುಖ್ಯ?

ಮಕ್ಕಳು ತಮ್ಮ ನಿತ್ಯ ಜೀವನಕ್ಕೆ ಸಂಬಂಧಿಸಿದ, ಉದ್ದೇಶಪೂರ್ವಕ,ವ್ಯಾವಹಾರಿಕ (practical) ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಅತ್ಯುತ್ತಮವಾಗಿ ಕಲಿಯುತ್ತಾರೆ. ತರಗತಿಯ ಒಳಗೆ ಮತ್ತು ಹೊರಗೆ ಅವರ ಇಂದ್ರಿಯಗಳಿಗೆ ವೈವಿಧ್ಯಮಯ ಮತ್ತು ಕುತೂಹಲ ಕೆರಳಿಸುವಂತಹ ಪ್ರಚೋದನೆಯನ್ನು ನೀಡಿದಾಗ, ಅವರು ಚನ್ನಾಗಿ ಪ್ರತಿಕ್ರಿಯಿಸುತ್ತಾರೆ, ಬರೇ ಪಠ್ಯ ಪುಸ್ತಕಗಳಿಂದ ವಿಶಾಲ ಹರವಿರುವಂತಹ ಕಲಿಕಾ ಅವಕಾಶಗಳು ಸಿಗಲಸಾಧ್ಯ. ಆದ್ದರಿಂದ ಪಠ್ಯಪುಸ್ತಕಗಳಿಗೆ ಪೂರಕವಾಗಿ ಕಲಿಕಾ ಅಗತ್ಯಗಳನ್ನು ಪೂರೈಸುವ ಚಟುವಟಿಕೆಗಳನ್ನು ಆಯೋಜಿಸುವುದು ಬಹಳ ಮುಖ್ಯ. ಸ್ಥಳೀಯ ಪರಿಸರದಲ್ಲಿ ಇರುವ ವಿಶ್ವಾಸಾರ್ಹ (authentic) ಸಂಪನ್ಮೂಲಗಳ ಸರಬರಾಜಿನಿಂದ ಇದನ್ನು ಸಾಧಿಸುವುದು ಹೇಗೆ ಎನ್ನುವುದನ್ನು ಈ ಸಂಪನ್ಮೂಲ ತಿಳಿಸಿಕೊಡುತ್ತದೆ.

ಸಂಪನ್ಮೂಲ 1, 'ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು" ಅನ್ನು ಓದಿರಿ



**Video: Using local resources**

## 1 ಮುದ್ರಣ-ಆಧಾರಿತ ಸಾಮುದಾಯಿಕ ಸಂಪನ್ಮೂಲಗಳು

ನಿಮ್ಮ ಭಾಷಾ ತರಗತಿಯನ್ನು ಉತ್ತಮಗೊಳಿಸಲು ಮುದ್ರಣ-ಆಧಾರಿತ ಸಾಮುದಾಯಿಕ ಸಂಪನ್ಮೂಲಗಳನ್ನು ಬಳಸುವ ದಾರಿಗಳ ಕುರಿತು ವಿಚಾರಮಾಡುವುದರಿಂದ ಪ್ರಾರಂಭಿಸಿ.

### ಪ್ರಸಂಗ ಅಧ್ಯಯನ 1: ಆಹಾರದ ಪೊಟ್ಟಣಗಳನ್ನು (ಪ್ಯಾಕೆಟ್) ಭಾಷೆ ಮತ್ತು ಸಾಕ್ಷರತೆ ತರಗತಿಯಲ್ಲಿ ಬಳಸುವುದು

*ಸತ್ಯದೇವರವರು ಮಂಡ್ಯದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು. ಆರನೇ ತರಗತಿಯ ವಿದ್ಯಾರ್ಥಿಗಳಲ್ಲಿ ಭಾಷಾ ಅರಿವನ್ನು ಮೂಡಿಸಲು*

*ಆಹಾರದ ಪೊಟ್ಟಣಗಳನ್ನು ತಾವು ಬಳಸುವ ರೀತಿಯನ್ನು ಅವರು ವಿವರಿಸಿದ್ದಾರೆ.*

ಪಠ್ಯಪುಸ್ತಕಗಳ ಹೊರತಾಗಿ ನನ್ನ ತರಗತಿಯಲ್ಲಿ ಹೆಚ್ಚು ಸಂಪನ್ಮೂಲಗಳೇನೂ ಇಲ್ಲ. ಘೋಷಣೆಗಳು, ಆಹಾರದ ಪ್ಯಾಕೆಟ್ ಗಳ ಮೇಲಿರುವ ಪದಾರ್ಥಗಳ ಪಟ್ಟಿಗಳು ಮತ್ತು ಸೂಚನೆಗಳು ಭಾಷಾ-ಆಧಾರಿತ ಚಟುವಟಿಕೆಗಳಿಗೆ ಚನ್ನಾಗಿ ತೆರೆದುಕೊಳ್ಳುತ್ತವೆ ಎಂದು ಕಳೆದ ವರ್ಷ ನನಗೆ ಹೊಳೆಯಿತು.

ಆದ್ದರಿಂದ, ಸ್ವಚ್ಛ ಮಾಡಿದ ಖಾಲಿ ಆಹಾರದ ಪ್ಯಾಕೆಟ್ ಗಳನ್ನು ಸಂಗ್ರಹಿಸಲು ಶುರು ಮಾಡಿದೆ. ನನ್ನ ನೆರೆಯವರಿಗೆ ಮತ್ತು ಸಂಬಂಧಿಕರಿಗೆ ಅವರ ಮನೆಯಲ್ಲಿ ಸಿಗುವ ಪ್ಯಾಕೆಟ್ ಗಳನ್ನು ಸಂಗ್ರಹಿಸಿಡಲು ಕೇಳಿಕೊಂಡೆ. ಹಲವು ಪ್ಯಾಕೆಟ್ ಗಳ ಮೇಲೆ ಬಣ್ಣ ಬಣ್ಣದ ಪದಗಳು, ನುಡಿಗಟ್ಟುಗಳು ಮತ್ತು ಚಿತ್ರಗಳಿದ್ದವು. (ಚಿತ್ರ 1)




**ಚಿತ್ರ 1 ಆಹಾರದ ಪ್ಯಾಕೆಟ್ ಗಳ ಮೇಲಿರುವ ಬರವಣಿಗೆಗೆ ಉದಾಹರಣೆಗಳು**

ನಾನು ತರಗತಿಗೆ ಹಲವು ಆಹಾರದ ಪ್ಯಾಕೆಟ್ ಗಳನ್ನು ತಂದು, ಅದರಲ್ಲಿ ಒಂದನ್ನು ನನ್ನ ವಿದ್ಯಾರ್ಥಿಗಳಿಗೆ ತೋರಿಸಿದೆ. ಅದೊಂದು ಮೊಸರಿನ ಪ್ಯಾಕೆಟ್. ನನ್ನ ವಿದ್ಯಾರ್ಥಿಗಳಲ್ಲಿ ಹಲವರಿಗೆ ಅದರ ಪರಿಚಯವಿತ್ತು ಏಕೆಂದರೆ ಅವರು ಸಾಮಾನ್ಯವಾಗಿ ಅದನ್ನು ಕೊಂಡು ಉಪಯೋಗಿಸುತ್ತಾರೆ. ಒಬ್ಬ ವಿದ್ಯಾರ್ಥಿಯನ್ನು ಕರೆದು ಅದರಲ್ಲಿ ಬರೆದಿರುವುದನ್ನು ಓದಲು ಹೇಳಿದೆ. ಅವನು ಅದಕ್ಕೆ ಹಾಕಿರುವ ಪದಾರ್ಥಗಳನ್ನು ಓದಿದ. ಅದನ್ನು ಯಾವುದರಿಂದ ಮಾಡಿದ್ದಾರೆ ಎಂದು ಓದಲು ಹೇಳಿದೆ. 'ಪಾಶ್ಚೀಕರಿಸದ ಟೋನ್ಡ್ ಹಾಲಿನಿಂದ ತಯಾರಿಸಿದೆ' ಇನ್ನೊಬ್ಬ ವಿದ್ಯಾರ್ಥಿಯನ್ನು ಕರೆದು ಅದರಲ್ಲಿ ಮುಂದಿರುವ ಘೋಷಣೆಯನ್ನು ಓದಲು ಹೇಳಿದೆ, 'ಮನೆಯಲ್ಲಿ ತಯಾರಿಸಿದಕ್ಕಿಂತ ಹೆಚ್ಚು ರುಚಿಕರ ಮೊಸರು!' ಪಾಶ್ಚೀಕರಿಸುವುದು ಮತ್ತು ಘೋಷಣೆಯಲ್ಲಿ ಇರುವ ರುಚಿಯ ವರ್ಣನೆ ಯಾರಿಗೆ ಎಷ್ಟರ ಮಟ್ಟಿಗೆ ನಿಜ ಎನ್ನುವುದರ ಕುರಿತು ಚರ್ಚಿಸಿದೆವು.

ಈ ಪ್ಯಾಕೆಟ್ ನ ಮೇಲಿರುವ ಇತರ ಬರವಣಿಗೆಯನ್ನು ಪರಿಶೀಲಿಸಿದೆವು. ಇದರಲ್ಲಿ ಐಎಸ್ 22000-2005 ದೃಢಿಕೃತ ಡೇರಿ ಎಂದು ಬರೆದಿತ್ತು ಮತ್ತು ನಗರದ ಸ್ವಚ್ಛತೆಯನ್ನು ಕಾಪಾಡಲು ಕೇಳಿಕೊಂಡಿದ್ದರು. ಮುಖ್ಯ ಪದಗಳು ಮತ್ತು ನುಡಿಗಟ್ಟುಗಳನ್ನು ಕಪ್ಪು ಹಲಗೆಯ ಮೇಲೆ ಬರೆದೆ.

ನಂತರ, ನನ್ನ ವಿದ್ಯಾರ್ಥಿಗಳಿಗೆ ಗುಣವಿಶೇಷಣ ನೆನಪಿದೆಯೇ ಎಂದು ಕೇಳಿದೆ. ಕಪ್ಪು ಹಲಗೆಯ ಮೇಲಿದ್ದ ಪದಗಳಿಂದ ಗುಣವಿಶೇಷಣಗಳನ್ನು (ರುಚಿಕರ, ಸ್ವಚ್ಛ) ಗುರುತಿಸಲು ಸಹಾಯ ಮಾಡಿದೆ. ಬೇರೆ ಮಾತೃಭಾಷೆ ಇರುವ ಮಕ್ಕಳನ್ನು ಈ ಪದಗಳಿಗೆ ಅವರ ಭಾಷೆಯ ಪರ್ಯಾಯ ಪದಗಳೇನು ಎಂದು ಕೇಳಿದೆ.

ನಂತರ, ವಿದ್ಯಾರ್ಥಿಗಳನ್ನು ಮೂರು ಅಥವಾ ನಾಲ್ವರಿರುವ ಗುಂಪುಗಳನ್ನಾಗಿ ಮಾಡಿ, ಗುಂಪಿಗೊಂದು ಪ್ಯಾಕೆಟ್ ಕೊಟ್ಟು, ಅದರಲ್ಲಿರುವ

ಮುಖ್ಯ ಪದಗಳು, ನುಡಿಗಟ್ಟುಗಳನ್ನು ಬರೆದುಕೊಂಡು, ಅವುಗಳ ಅರ್ಥ ಕಂಡುಹಿಡಿದು, ಅದರಲ್ಲಿ ಇರುವ ಎಲ್ಲ ಗುಣವಿಶೇಷಣಗಳನ್ನು ಗುರುತಿಸಲು ಹೇಳಿದೆ.

ಕೊನೆಯ ಅಂದರೆ ಇಡೀ ತರಗತಿಯೊಡನೆ ವಿಚಾರ ಹಂಚಿಕೊಳ್ಳುವ ಅವಧಿಯಲ್ಲಿ, ಅವರಿಗೆ ಸಿಕ್ಕ ಪ್ಯಾಕೆಟ್ ನಲ್ಲಿದ್ದ ಗುಣವಿಶೇಷಣಗಳನ್ನು ಆಯಾ ಗುಂಪಿನ ಸದಸ್ಯರು ಹೇಳಿದರು. ಕಪ್ಪು ಹಲಗೆಯ ಮೇಲೆ ಈ ಪದಗಳನ್ನು ಪಟ್ಟಿ ಮಾಡಿದೆ. ಇದನ್ನು ಎಲ್ಲರೂ ಬರೆದುಕೊಳ್ಳಲು ಸೂಚನೆ ನೀಡಿದೆ. ಕೆಲವು ಗುಣವಿಶೇಷಣಗಳಲ್ಲದ ಪದಗಳು ಪಟ್ಟಿಯಲ್ಲಿ ಸೇರಿಕೊಂಡು, ಸ್ಪಷ್ಟೀಕರಣಕ್ಕೆ ಸಹಾಯ ಮಾಡಿದವು.

ಇದಾದ ನಂತರ ಗುಂಪುಗಳಿಗೆ ಪ್ಯಾಕೆಟ್ಗಳನ್ನ ಬದಲಿ ಮಾಡಿ ಕೊಟ್ಟು ಈ ಚಟುವಟಿಕೆಯನ್ನು ಮತ್ತೆ ಮತ್ತೆ ಮಾಡಿಸಿದೆ. ಆದರೆ ಒಂದು ಸಲ ವಿದ್ಯಾರ್ಥಿಗಳಿಗೆ ನಾಮಪದಗಳ ಮೇಲೆ ಮತ್ತೊಂದು ಸಲ ಸಂಧಿಗಳ ಮೇಲೆ ಗಮನ ಕೇಂದ್ರೀಕರಿಸುವಂತೆ ಮಾಡಿದೆ. ಈ ಸಲವೂ ಮೊಸರಿನ ಪ್ಯಾಕೆಟ್ ನ ಉದಾಹರಣೆಯಿಂದ ಪ್ರಾರಂಭಿಸಿ, ನಂತರ ಗುಂಪುಗಳಿಗೆ ಅವರ ಪಾಲಿಗೆ ಬಂದ ಪ್ಯಾಕೆಟ್ ನ ನೋಡಿ ಅಭ್ಯಾಸ ಮಾಡುವಂತೆ ಹೇಳಿದೆ.

ನಂತರದ ಹಂಚಿಕೊಳ್ಳುವ ಅವಧಿ ನನ್ನ ವಿದ್ಯಾರ್ಥಿಗಳ ಭಾಷಾ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವುದರಲ್ಲಿ ಬಹಳ ಆಸಕ್ತಿದಾಯಕವಾದ ಅವಧಿಯಾಗಿತ್ತು. ಉದಾಹರಣೆಗೆ, ನಾಮ ವಿಭಕ್ತಿಗಳನ್ನು ನೋಡುವಾಗ ಪಾಸ್ಚೀಕರಿಸಿದ ಹಾಲಿನಿಂದ ತಯಾರಿಸಿದೆ ಹೇಳುವಾಗ 'ಹಾಲು' ಮೂಲ ಪದಕ್ಕೆ ಇಂದ ಪ್ರತ್ಯಯ ಸೇರಿ, ತಯಾರಾಗುವ ಕ್ರಿಯೆಗೆ ವಿಶೇಷತೆಯನ್ನು ಕೊಡುತ್ತಿದೆ ಎಂದು ತಿಳಿದರು; ಸಂಧಿಗಳನ್ನು ನೋಡುವಾಗ ಅವರ ಉದಾಹರಣೆಗಳಲ್ಲಿ ಕನ್ನಡದ ಪದಗಳಿಗೆ (ಮನೆ + ಅಲ್ಲಿ => ಮನೆಯಲ್ಲಿ, ಆಗಮ ಸಂಧಿ) ಕನ್ನಡ ಸಂಧಿಗಳೂ, ಸಂಸ್ಕೃತ ಪದಗಳಿದ್ದಾಗ (ಅತಿ+ಉತ್ತಮ=> ಅತ್ಯುತ್ತಮ, ಯಣ್ ಸಂಧಿ) ಸಂಸ್ಕೃತ ಸಂಧಿಗಳಾಗಿದ್ದನ್ನು ಗುರುತಿಸಿದರು.

ಈಗಲೂ ನನ್ನ ವಿದ್ಯಾರ್ಥಿಗಳು ಒಮ್ಮೊಮ್ಮೆ ಅವರ ಮನೆಯಲ್ಲಿ ಯಾವುದೋ ಪ್ಯಾಕೆಟ್ ನಲ್ಲಿ ಗುರುತಿಸಿದ ಗುಣ ವಾಚಕ, ನಾಮಪದ ಅಥವಾ ಸಂಧಿಗಳ ಉದಾಹರಣೆಗಳನ್ನು ನನಗೆ ಬಂದು ಹೇಳುತ್ತಿರುತ್ತಾರೆ.

**ಚಿಂತನೆಗೊಂದು ಕ್ಷಣ**

- ಸತ್ಯದೇವ ರವರ ಚಟುವಟಿಕೆಯಲ್ಲಿ ಇದ್ದ ಭಾಷಾ ಕಲಿಕಾ ಅವಕಾಶಗಳು ಯಾವುವು?
- ನಿಮ್ಮ ವಿದ್ಯಾರ್ಥಿಗಳಿಗೆ ಸೂಕ್ತವಾಗುವಂತೆ ಇದನ್ನು ಯಾವ ರೀತಿ ಹೊಂದಿಸಿಕೊಳ್ಳುವಿರಿ ಮತ್ತು ಇದನ್ನು ಹೇಗೆ ವಿಸ್ತರಿಸಬಹುದು?
- ಈ ರೀತಿಯ ಚಟುವಟಿಕೆಗೆ ಇನ್ಯಾವ ವಿಧಗಳ ಮುದ್ರಣ-ಆಧಾರಿತ ಸಂಪನ್ಮೂಲಗಳು ಸರಿ ಹೊಂದುತ್ತವೆ?
  ಈ ಚಟುವಟಿಕೆಯಲ್ಲಿ ಮಕ್ಕಳು ನಾಮಪದಗಳು ಮತ್ತು ಅವನ್ನು ವಿವರಿಸುವ ಪದಗಳ (ಗುಣವಾಚಕಗಳ) ಬಗ್ಗೆ ಮಾತನಾಡಿದರು. ನೀವು ಅವರಿಗೆ ಅವರಿಗೆ ಇಷ್ಟವಾದ ತಿಂಡಿಯನ್ನು ಮಾಡುವ ವಿಧಾನ ಅಥವಾ ಆ ತಿಂಡಿಗೆ ಒಂದು ಘೋಷಣೆ ಬರೆಯಲು ಹೇಳಬಹುದು. ಇದಕ್ಕೆ ಬೇರೆ ಬೇರೆ ಸಂಪನ್ಮೂಲಗಳನ್ನು ಬಳಸಬಹುದು-ಉದಾಹರಣೆಗೆ, ಬಸ್ಸಿನ ವೇಳಾಪಟ್ಟಿ, ಸಿನೆಮಾ ಟಿಕೆಟ್ ಗಳು ಅಥವಾ ಮ್ಯಾಗಜೀನ್ ಗಳ ಜಾಹೀರಾತುಗಳು.

## ಚಟುವಟಿಕೆ 1: ನಿಮ್ಮ ವಿದ್ಯಾರ್ಥಿಗಳೊಂದಿಗೆ ಮುದ್ರಣ-ಆಧಾರಿತ ಸಂಪನ್ಮೂಲಗಳನ್ನು ಬಳಸುವುದು

ಕನ್ನಡ ಪಠ್ಯಪುಸ್ತಕದಲ್ಲಿರುವ ನೀವು ಕಲಿಸಬೇಕೆಂದಿರುವ ಭಾಷೆಯ ಅಂಶಗಳ ಬಗ್ಗೆ ಮುಂದಾಲೋಚನೆ ಮಾಡಿಕೊಳ್ಳಿ. ಸ್ಥಳೀಯ ಪರಿಸರದಲ್ಲಿಯೇ ದೊರಕುವ ಮುದ್ರಣ-ಆಧಾರಿತ ಸಂಪನ್ಮೂಲಗಳನ್ನು ಇದಕ್ಕೆ ಪೂರಕವಾಗಿ ಹೇಗೆ ಬಳಸಬಹುದು ಎಂದು ಚಿಂತಿಸಿ. ನಿಮ್ಮ ವಿದ್ಯಾರ್ಥಿಗಳಿಗೆ ಇದು ಸೂಕ್ತವೇ ಮತ್ತು ನಿಮಗೆ ಇದು ಸರಾಗವಾಗಿ ದೊರುಕುವುದೇ ಎನ್ನುವುದನ್ನು ಪರಿಗಣಿಸಿ. ಉದಾಹರಣೆಗೆ, ಆಹಾರದ ಪ್ಯಾಕೆಟ್ ಗಳ ಬದಲಾಗಿ ಪತ್ರಿಕೆಗಳ ಜಾಹೀರಾತುಗಳು, ಉತ್ಪನ್ನಗಳ ಅಥವಾ ಪ್ರಕ್ರಿಯೆಗಳ ಸೂಚನೆಗಳು ಮತ್ತು ಸಮುದಾಯದಲ್ಲಿ ನಡೆಯುತ್ತಿರುವ ಘಟನೆಗಳ ಕರಪತ್ರಗಳನ್ನು ಬಳಸಬಹುದು.

ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ವಿತರಿಸಲು ಬೇಕಾಗುವಷ್ಟು ಸಾಮಗ್ರಿಗಳನ್ನು ಸಂಗ್ರಹಿಸಿ. ನೀವು ಕೇಂದ್ರಿಕರಿಸಬೇಕೆಂದಿರುವ ಭಾಷಾ

ಅಂಶಕ್ಕೆ ನೀವು ಕೊಡುತ್ತಿರುವ ಸಾಮಗ್ರಿಯಲ್ಲಿ ಸಾಕಷ್ಟು ಉದಾಹರಣೆಗಳಿವೆ ಎಂದು ಖಚಿತಪಡಿಸಿಕೊಳ್ಳಿ.

ನಿಮ್ಮ ಪಾಠದ ವಿವಿಧ ಅಂಶಗಳು ಮತ್ತು ಅದಕ್ಕೆ ಬೇಕಾಗುವ ಸಮಯದ ಸ್ಥೂಲ ಚಿತ್ರ ರಚಿಸಿಕೊಳ್ಳಿ. ಮುಂದಿನ ಅವಧಿಯಲ್ಲಿ ಕೆಲವು ವಿಸ್ತರಣಾ ಚಟುವಟಿಕೆಗಳನ್ನು ಮಾಡಬೇಕಾಗಬಹುದು ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಿ.

**ಒತನೆಗೊಂದು ಕ್ಷಣ**

ನೀವು ಚಟುವಟಿಕೆಯನ್ನು ಮಾಡಿದ ನಂತರ, ಅದು ಹೇಗೆ ಆಯಿತೆಂಬುದರ. ಬಗ್ಗೆ ಚಿಂತನೆ ನಡೆಸಿ

- ಪಾಠದ ಮೂಲಕ ಭಾಷೆ ಕಲಿಕೆ ಏನಾಯ್ತು?
- ನಿಮ್ಮ ವಿದ್ಯಾರ್ಥಿಗಳ ಮಾತನಾಡುವ, ಆಲಿಸುವ, ಓದು ಮತ್ತು ಬರವಣಿಗೆಯ ಕೌಶಲಗಳನ್ನು ಪರಿವೀಕ್ಷಿಸಲು ಮತ್ತು ಮೌಲ್ಯಾಂಕನ ಮಾಡಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?

## ಮಾತು-ಆಧಾರಿತ ಸ್ಥಳೀಯ ಸಂಪನ್ಮೂಲಗಳು

ನಿಮ್ಮ ವಿದ್ಯಾರ್ಥಿಗಳ ಕಲಿಕೆಗೆ ಕೊಡುಗೆ ನೀಡಬಹುದಾದ ಅನೇಕ ಮಾತು-ಆಧಾರಿತ ಸಂಪನ್ಮೂಲಗಳೂ ನಿಮ್ಮ ಸಮುದಾಯದಲ್ಲಿ ದೊರಕುತ್ತದೆ.

### ಪ್ರಸಂಗ ಅಧ್ಯಯನ 2: ಹತ್ತಿ ನೇಕಾರರ ಭೇಟಿ

*ರೇಶಂ ರವರು ಬಳ್ಳಾರಿಯ ಹತ್ತಿರದ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕಿ. ಅವರು ನಾಲ್ಕನೇ ತರಗತಿಯ ಮಕ್ಕಳಿಗೆ ತಾವು ಸಂಘಟಿಸಿದ ಅತಿಥಿಯ ಭೇಟಿಯನ್ನು ವಿವರಿಸಿದ್ದಾರೆ.*

ನಾನು ಮಾಡುತ್ತಿದ್ದ ಪಠ್ಯಪುಸ್ತಕದಲ್ಲಿದ್ದ ಒಂದು ಪಾಠ ಹತ್ತಿ ಬೆಳೆಯುವುದರ ಕುರಿತಾಗಿತ್ತು. ನಮ್ಮ ಹಳ್ಳಿಯಲ್ಲಿ ನೇಕಾರರ ಮತ್ತು ಪ್ರಿಂಟಿಂಗ್ ಸಂಘವಿತ್ತು. ಇಲ್ಲಿನ ಕೆಲಸಗಾರರಲ್ಲಿ ಒಬ್ಬರನ್ನು ಕರೆಸಿ, ಅವರ ವೃತ್ತಿಯ ಬಗ್ಗೆ ತರಗತಿಯಲ್ಲಿ ಅವರು ಮಾತನಾಡಿದರೆ ಆಸಕ್ತಿದಾಯಕವಾಗಿರುತ್ತದೆ ಎಂದು ಅನ್ನಿಸಿತು.

ಒಂದು ದಿನ, ಶಾಲೆ ಮುಗಿದ ನಂತರ,ಸಂಘಕ್ಕೆ ಭೇಟಿ ನೀಡಿದೆ ಮತ್ತು ಅಲ್ಲಿನ ಮುಖ್ಯಸ್ಥರಾದ ಅರುಣ್ ರವರ ಜೊತೆ ಮಾತನಾಡಿದೆ (ಚಿತ್ರ 2). ಅವರು ಸಂತೋಷದಿಂದ ಶಾಲೆಗೆ ಬರಲು ಒಪ್ಪಿಕೊಂಡರು. ನಾನು ಅವರಿಗೆ ಮಕ್ಕಳ ವಯಸ್ಸು ಮತ್ತು ಅವರ ಆಸಕ್ತಿಯ ಕುರಿತು ವಿವರಗಳನ್ನು ನೀಡಿದೆ. ಅವರು ಬರುವಾಗ ಬಟ್ಟೆ ಮತ್ತು ಬಣ್ಣಗಳ ಸ್ಯಾಂಪಲ್ ಗಳನ್ನು ತರಲು ಹೇಳಿದೆ, ಅದರ ಜೊತೆಗೆ ಮಗ್ಗಕ್ಕೆ ಸಂಬಂಧಿಸಿದ ಲಾಳಿಯಂತಹ ಕೆಲವು ಸಾಮಾನುಗಳನ್ನೂ ತಂದು ಭಾಷಣದ ಮಧ್ಯೆ ಸೂಕ್ತ ಸಮಯದಲ್ಲಿ ತೋರಿಸಲು ಕೇಳಿಕೊಂಡೆ.



**ಚಿತ್ರ 2 ನೇಕಾರ**

ನಂತರ ನನ್ನ ವಿದ್ಯಾರ್ಥಿಗಳಿಗೆ ಅರುಣ್ ರವರ ಭೇಟಿಯ ಬಗ್ಗೆ ಹೇಳಿದೆ. ಈ ಸುದ್ದಿ ತರಗತಿಯಲ್ಲಿ ಸಾಕಷ್ಟು ಸಂಭ್ರಮವನ್ನು ಉಂಟುಮಾಡಿತು. ಈ ಭೇಟಿಗೆ ತಯಾರಾಗಲು ನನ್ನ ವಿದ್ಯಾರ್ಥಿಗಳನ್ನು ನಾಲ್ವರ ಗುಂಪುಗಳನ್ನಾಗಿ ಮಾಡಿದೆ. ಪ್ರತಿ ಗುಂಪೂ ಅರುಣ್ ರವರು ಬಂದಾಗ ಕೇಳಬಹುದಾದ ಎರಡು ಪ್ರಶ್ನೆಗಳನ್ನು ಯೋಚಿಸಿ, ಅದನ್ನು ಅವರ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳಿದೆ. ಈ ಚಟುವಟಿಕೆಯ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ಗುಂಪುಗಳಲ್ಲಿ ಚನ್ನಾಗಿ ಮಾತನಾಡುತ್ತಿರುವುದನ್ನು ನಾನು ಗಮನಿಸಿದೆ. ಈ ಮಾತು, ಬರೀ ಪ್ರಶ್ನೆಯ ಬಗ್ಗೆ ಒಮ್ಮತ ಮೂಡಿಸಿಕೊಳ್ಳುವುದಕ್ಕಷ್ಟೇ ಸೀಮಿತವಾಗಿರಲಿಲ್ಲ, ಆದರೆ ಅದನ್ನು ಚನ್ನಾಗಿ ಬರೆಯುವ ರೀತಿಯ ಕುರಿತೂ ಚರ್ಚಿಸುತ್ತಿದ್ದರು.

ಅವರು ಮುಗಿಸಿದ ನಂತರ, ಅವರು ಕೇಳಬೇಕೆಂದಿರುವ ಪ್ರಶ್ನೆಗಳನ್ನು ತರಗತಿಯಲ್ಲಿ ಹಂಚಿಕೊಳ್ಳಲು, ಗುಂಪಿನಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಲು ಹೇಳಿದೆ. ಪ್ರಶ್ನೆಗಳನ್ನು ನಾನು ಕಪ್ಪು ಹಲಗೆಯ ಮೇಲೆ ಬರೆಯುವ ಬದಲು ಅವರೇ ಯಾರಾದರೂ ಬರೆಯುತ್ತಾರಾ ಎಂದು ಕೇಳಿದೆ. ಅಬ್ಬಾ! ಎಷ್ಟೊಂದು ಕೈಗಳು ಮೇಲೆ ಬಂದವು. ಮುಂಬರುವ ದಿನಗಳಲ್ಲಿ ತರಗತಿಯಲ್ಲಿ ಬೇರೆಯವರಿಗೂ ಕಪ್ಪು ಹಲಗೆಯ ಮೇಲೆ ಬರೆಯುವ ಅವಕಾಶಕೊಡಲು ಪ್ರಯತ್ನಿಸಬೇಕೆಂದು ಯೋಚಿಸಿದೆ.

ಹಂಚಿಕೊಳ್ಳುವ ಅವಧಿಯ ಕೊನೆಯಲ್ಲಿ, ಅತಿಥಿಗಳಿಗೆ ಕೇಳಬಹುದಾದ ಪ್ರಶ್ನೆಗಳ ದೊಡ್ಡ ಪಟ್ಟಿಯೇ ಇತ್ತು. ಎಲ್ಲರೂ ಕೂಡಿ,ಯಾವ ಪ್ರಶ್ನೆಗಳು ಒಂದೇ ತರನಾಗಿದ್ದವೋ ಅವುಗಳನ್ನೆಲ್ಲ ಹೊಡೆದು ಹಾಕಿ, ಮಿಕ್ಕ ಎಂಟನ್ನು ಸೂಕ್ತವಾದ ಕ್ರಮದಲ್ಲಿ ಜೋಡಿಸಿದೆವು. ನನ್ನ ವಿದ್ಯಾರ್ಥಿಗಳಿಗೆ ಅಂತಿಮ ಪ್ರಶ್ನೆ ಪಟ್ಟಿಯನ್ನು ನೋಟ್ ಪುಸ್ತಕದಲ್ಲಿ ಬರೆದುಕೊಳ್ಳಲು ತಿಳಿಸಿ, ಕ್ಲಾಸ್ ಮುಗಿಸಿದೆ.

ನನ್ನ ವಿದ್ಯಾರ್ಥಿಗಳಲ್ಲಿ ಕೆಲವರು ಅರುಣ್ ರವರನ್ನು ಪ್ರಶ್ನೆ ಕೇಳಲು ಬಹಳ ಉತ್ಸುಕರಾಗಿದ್ದರು; ಇನ್ನು ಕೆಲವರಿಗೆ ಹಿಂಜರಿಕೆ ಇತ್ತು. ಅವರಲ್ಲಿ ಕೆಲವರನ್ನು ಪ್ರಶ್ನೆ ಕೇಳುವವರು ಎಂದು ಆಯ್ಕೆ ಮಾಡುವ ಬದಲು, ಮಾರನೇ ದಿನ ಅರುಣ್ ರವರು ಬಂದಾಗ ಪ್ರತೀ ಒಬ್ಬರೂ ಇದರಲ್ಲಿ ಯಾವುದಾದರೂ ಪ್ರಶ್ನೆಯನ್ನು ಕೇಳಲು ತಯಾರಾಗಿರಬೇಕೆಂದು ಸಲಹೆ ನೀಡಿದೆ. ಈ ಮನೆಕೆಲಸವನ್ನು ನನ್ನ ವಿದ್ಯಾರ್ಥಿಗಳೆಲ್ಲ ಬಹಳ ಗಂಭೀರವಾಗಿ ಪರಿಗಣಿಸಿದರು.

ಅರುಣ್ ರವರ ಭೇಟಿ ಬಹಳ ಯಶಸ್ವಿಯಾಯಿತು. ಅವರು ಪ್ರಾರಂಭದಲ್ಲಿ ತಮ್ಮ ನೇಯ್ಗೆ ಮತ್ತು ಪ್ರಿಂಟಿಂಗ್ ಕೆಲಸವನ್ನು ಪರಿಚಯಿಸಿದರು. ಇದನ್ನು ಮಾಡುವಾಗ ಅವರು ತಾವು ತಂದ ಬಟ್ಟೆಗಳ ಸ್ಯಾಂಪಲ್ ಗಳನ್ನು ತೋರಿಸುತ್ತಿದ್ದರು ಮತ್ತು ತಾವು ತಂದ ಉಪಕರಣಗಳನ್ನು ನನ್ನ ವಿದ್ಯಾರ್ಥಿಗಳು ಮುಟ್ಟಲು ಅವಕಾಶ ಕೊಟ್ಟರು. ನಂತರ ಅವರು ಅವರಿಗೆ ಇಷ್ಟ ಬಂದ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಪ್ರಶ್ನೆ ಕೇಳುವಂತೆ ಹೇಳಿದರು. ಇವರಲ್ಲಿ ಕೆಲವರು ಹೆಚ್ಚಿನ ಆತ್ಮವಿಶ್ವಾಸದಿಂದ ಕೇಳಿದರು, ಕೆಲವರಿಗೆ ಕಡಿಮೆ ಇತ್ತು. ಕೇಳಬೇಕೆಂದಿದ್ದ ಕೆಲವು ಪ್ರಶ್ನೆಗಳಿಗೆ ಅವರ ಪರಿಚಯ ಪ್ರಸ್ತುತಿಯಲ್ಲೇ ಉತ್ತರ ಸಿಕ್ಕಿದ್ದರಿಂದ ನನ್ನ ವಿದ್ಯಾರ್ಥಿಗಳು ಸಿದ್ಧ ಪಡಿಸಿದ ಕೆಲವು ಪ್ರಶ್ನೆಗಳು ಈಗ ಸೂಕ್ತವಿರಲಿಲ್ಲ.

ಒಬ್ಬಿಬ್ಬರು ಅದಕ್ಕೆ ಬದಲಾಗಿ ಬೇರೆ ಪ್ರಶ್ನೆಗಳನ್ನು ಕೇಳಿದರು.

**ಚಿಂತನೆಗೊಂದು ಕ್ಷಣ.......**

- ಅರುಣ್ ರವರ ಭೇಟಿಯ ತಯಾರಿಯ ಸಮಯದಲ್ಲಿ ಹಾಗು ಅವರ ಭೇಟಿಯ ವೇಳೆಯಲ್ಲಿ ಆದ ಭಾಷಾ ಕಲಿಕಾ ಸಾಧನೆ ಏನು?
- ಅವರು ಬಂದಾಗ ಕೇಳಬೇಕೆಂದಿದ್ದ ಕೆಲವು ಪ್ರಶ್ನೆಗಳು ಸೂಕ್ತವಾಗಿಲ್ಲದಿರುವುದು ಒಂದು ದೊಡ್ಡ ವಿಷಯವೇ?

ನಿಮ್ಮಲ್ಲಿ ಸ್ಥಳೀಯವಾಗಿ ಮತ್ತು ಅದಕ್ಕಿಂತ ಹೆಚ್ಚಿನ ವ್ಯಾಪ್ತಿ ಇರುವ ಸಮುದಾಯದಲ್ಲಿ ಜ್ಞಾನ, ಕೌಶಲ ಮತ್ತು ಅನುಭವವಿರುವ ವ್ಯಕ್ತಿಗಳನೇಕರು ಇರುತ್ತಾರೆ. ಅವರನ್ನು, ಅದರಲ್ಲೂ ವಿಶೇಷವಾಗಿ, ನೀವು ಮಾಡುತ್ತಿರುವ ಪಾಠಕ್ಕೆ ಸಂಬಂಧಿಸಿರುವ ಜ್ಞಾನ, ಕೌಶಲ ಮತ್ತು ಅನುಭವವಿರುವ ವ್ಯಕ್ತಿಗಳನ್ನು ತರಗತಿಯಲ್ಲಿ ಮಕ್ಕಳೊಡನೆ ಮಾತನಾಡಲು ಕರೆಯಬಹುದು. ಉದಾಹರಣೆಗೆ ಗ್ರಾಮ ಪಂಚಾಯ್ತಿಯ ಸದಸ್ಯರು, ಪೋಲಿಸರು, ಜಿಲ್ಲಾ ಆರೋಗ್ಯಾಧಿಕಾರಿಗಳು, ಸಮೀಪದಲ್ಲಿ ಅಂಗಡಿ ಇಟ್ಟಿರುವವರು, ಕರಕುಶಲತೆ ಉಳ್ಳವರು, ಮೆಕ್ಯಾನಿಕ್ ಗಳು, ಕಲಾವಿದರು, ಸಂಗೀತಗಾರರು, ರೈತರು ಅಥವಾ ಅಡುಗೆಯವರನ್ನು ಕರೆಯಬಹುದು. ಪೋಷಕರು ಮತ್ತು ಅಜ್ಜಿ ತಾತಂದಿರು ಸಹ ಕೊಡುಗೆಯುವನ್ನು ನೀಡಲು ಸಾಧ್ಯವಿದೆ - ಗತಕಾಲದ ಬಗ್ಗೆ ತಮಗೆ ಜ್ಞಾಪಕವಿರುವುದನ್ನು ಹೇಳಿ ಆ ಸಮುದಾಯದ ಚರಿತ್ರೆ ಮತ್ತು ಸಂಸ್ಕೃತಿಯ ಬಗ್ಗೆ ಮೌಲ್ಯಯುತ ಒಳನೋಟಗಳನ್ನು ಕೊಡಬಲ್ಲರು.

ಸಲಹೆಗಳಿಗೆ ಮತ್ತು ಅತಿಥಿಗಳನ್ನು ಸಂಪರ್ಕಿಸುವುದಕ್ಕೆ ನಿಮ್ಮ ಸಹೋದ್ಯೋಗಿಗಳ ಸಹಾಯವನ್ನು ಪಡೆಯಿರಿ.

## ಚಟುವಟಿಕೆ 2: ನಿಮ್ಮ ತರಗತಿಗೆ ಅತಿಥಿ ಭಾಷಣಕಾರರನ್ನು ಆಹ್ವಾನಿಸುವುದು

ನಿಮ್ಮ ಸಮುದಾಯದ ಸದಸ್ಯರ ಭೇಟಿಯನ್ನು ಆಯೋಜಿಸಿ. ನೀವೇ ಖುದ್ದಾಗಿ ಹೋಗಿ ಅಥವಾ ದೂರವಾಣಿಯ ಮೂಲಕ ಅಥವಾ ಪತ್ರದ ಮೂಲಕ ಅವರನ್ನು ಆಹ್ವಾನಿಸಿ. ಅವರು ಆಹ್ವಾನವನ್ನು ಸ್ವೀಕರಿಸಿದರೆ, ನಿಮ್ಮ ವಿದ್ಯಾರ್ಥಿಗಳ ಆಸಕ್ತಿ ಕುತೂಹಲಗಳ ಕುರಿತಾಗಿ ಒಂದು ದೀರ್ಘ ಸಂಭಾಷಣೆ ನಡೆಸಿರಿ. ಭೇಟಿಯ ದಿನಾಂಕವನ್ನು ನಿಗದಿಪಡಿಸಿಕೊಳ್ಳಿ.

ಅತಿಥಿ ಭಾಷಣಕಾರರ ಶಾಲಾ ಭೇಟಿಯ ಕುರಿತು ಮುಂಚಿತವಾಗಿಯೇ ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಿ. ಉತ್ತರ ತಿಳಿದುಕೊಳ್ಳಬೇಕೆಂದಿರುವಿದರ ಬಗ್ಗೆ ಕೆಲವು ಪ್ರಶ್ನೆಗಳನ್ನು ರಚಿಸಲು ಸಮಯ ಮೀಸಲಿಡಿ (ಪ್ರಸಂಗ ಅಧ್ಯಯನ 2 ನ್ನು ನೋಡಿ).

ಅತಿಥಿಯವರು ಭೇಟಿ ಮುಗಿಸಿ ಹೋದ ನಂತರ ಮಾಡಬಹುದಾದ ಚಟುವಟಿಕೆಗಳ ಬಗ್ಗೆ ಸಹ ಮುಂಚಿತವಾಗಿ ಯೋಚಿಸಿ. ಉದಾಹರಣೆಗೆ, ವಿದ್ಯಾರ್ಥಿಗಳು ಹೊಸದಾಗಿ ಕಲಿತರುವ, ಅತಿಥಿಯ ವೃತ್ತಿ ಸಂಬಧಿತ ಪದಗಳನ್ನು ಯಾವ ರೀತಿ ಮನದಟ್ಟು ಮಾಡಿಸಬಹುದು?

ಅತಿಥಿಗಳು ಭೇಟಿ ನೀಡಿ ಹೊರಟ ನಂತರ ವಿದ್ಯಾರ್ಥಿಗಳ ಕೈಯಲ್ಲಿ ಧನ್ಯವಾದ ತಿಳಿಸಿ ಕಾಗದ ಬರೆಸುವುದನ್ನು ಮರೆಯದಿರಿ.

**ಚಿಂತನೆಗೊಂದು ಕ್ಷಣ....**

- ಅತಿಥಿ ಭಾಷಣಕಾರರ ಭೇಟಿಯಿಂದ ಉದ್ಭವವಾದ ಕಲಿಕಾ ಅವಕಾಶಗಳು ಯಾವುವು?
- ಭೇಟಿಯ ನಂತರ, ವಿದ್ಯಾರ್ಥಿಗಳೊಂದಿಗೆ ನೀವು ಯಾವ ರೀತಿಯ ಮುಂದವರಿಕೆ ಚಟುವಟಿಕೆಗಳನ್ನು ಮಾಡಬಹುದು?

ಈ ರೀತಿಯ ಭೇಟಿಗಳ ನಂತರ, ಕಲಿಕೆಯನ್ನು ಮುಂದುವರಿಸಲು ಪ್ರತ್ಯೇಕವಾಗಿ ಅಥವಾ ಗುಂಪುಗಳಲ್ಲಿ ಬರವಣಿಗೆ ಕಾರ್ಯವನ್ನು ಮಾಡಿಸಬಹುದು. ವಿದ್ಯಾರ್ಥಿಗಳು ಭೇಟಿಯ ಕುರಿತು ಅವರ ನೋಟ್ ಪುಸ್ತಕದಲ್ಲಿ ಸಚಿತ್ರ ವಿವರಣೆಯನ್ನು ಬರೆಯಬಹುದು.ಪರ್ಯಾಯವಾಗಿ, ಭಾಷಣದಿಂದ ಅವರಿಗೆ ದೊರಕಿದ ಮಾಹಿತಿಯ ಮೇರೆಗೆ, ಅತಿಥಿ ಭಾಷಣಕಾರರ 'ಜೀವನದಲ್ಲಿ ಒಂದು ದಿನ" ವನ್ನು ವಿವರಿಸಬಹುದು.

ಅಕಸ್ಮಾತ್ತಾಗಿ, ಅತಿಥಿಗಳು ತಮ್ಮ ಗತ ಜೀವನನದ ಬಗ್ಗೆ ತಿಳಿಸಿದ್ದರೆ, ವಿದ್ಯಾರ್ಥಿಗಳು ಅವರ ಅಂದಿನ - ಇಂದಿನ ಜೀವನದಲ್ಲಿರುವ ವ್ಯತ್ಯಾಸಗಳನ್ನು ಕುರಿತು ಒಂದು ವಿವರಣಾತ್ಮಕ ಲೇಖನವನ್ನು ಬರೆಯಬಹುದು.

ಅತಿಥಿ ಭಾಷಣಕಾರರನ್ನು ಭೇಟಿಗೆ ಪರ್ಯಾಯವಾಗಿ ಅಥವಾ ಅವರು ಬಂದು ಹೋದ ನಂತರದ ಚಟುವಟಿಕೆಯಾಗಿ, ಹಿರಿಯ ವಿದ್ಯಾರ್ಥಿಗಳು ಸಮುದಾಯದ ಹಿರೀಕರನ್ನು ಗುರುತಿಸಿ, ಅವರನ್ನು ಸಂದರ್ಶಿಸುವ ಕಾರ್ಯಕ್ರಮವನ್ನು ಯೋಜಿಸಬಹುದು. ಅಂತಹ ಮುಖಾಮುಖಿ ಮಾತು ಕತೆಯನ್ನು ಮೊಬೈಲ್ ಅಥವಾ ಬೇರೆ ಯಾವುದಾದರೂ ಧ್ವನಿ ಮುದ್ರಣದ ಸಾಧನ ಬಳಸಿ ಧ್ವನಿ ಮುದ್ರಿಸಲು ಪ್ರೋತ್ಸಾಹಿಸಿ. ಈ ರೀತಿ ಸಣ್ಣ ಗುಂಪುಗಳಲ್ಲಿ ನಡೆಸಿದ ಒಂದೇ ತೆರನಾದ ಕೆಲಸ ಮಾಡುವ ವೈವಿಧ್ಯಮಯ ಅನುಭವಗಳುಳ್ಳ ಅನೇಕ ವ್ಯಕ್ತಿಗಳ ಸಂದರ್ಶನಗಳನ್ನು ಕ್ರೋಢಿಕರಿಸಿ, ಸಮುದಾಯ ಸಂಬಂಧಿತ ವಿಷಯದ ಕುರಿತಾಗಿ ಇರುವ ವಿಭಿನ್ನ ದೃಷ್ಟಿಕೋನಗಳನ್ನು ನಿಮ್ಮ ವಿದ್ಯಾರ್ಥಿಗಳು ಪರಿಗಣಿಸಿ ಒಂದು ಲೇಖನವನ್ನು ಬರೆಯಬಹುದು. ವಿದ್ಯಾರ್ಥಿಗಳ ಈ ಲೇಖನವನ್ನು ಸ್ಥಳೀಯ ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಲು ಸಹ ಪ್ರಯತ್ನಿಸಬಹುದು.

ಅತಿಥಿ ಭೇಟಿ ಅಥವಾ ಸಂದರ್ಶನದ ನಂತರದಲ್ಲಿ ವಿದ್ಯಾರ್ಥಿಗಳು ಪಾತ್ರಾಭಿನಯ ಸಹ ಮಾಡಬಹುದು. ಜೋಡಿಗಳಲ್ಲಿ, ಒಬ್ಬರು ಸಂದರ್ಶಕರಾಗಿ ಮತ್ತೊಬ್ಬರು ಸಂದರ್ಶನ ಕೊಡುವವರಾಗಿ ಆಭಿನಯಿಸಬಹುದು. ಇದಕ್ಕೆ ಅವರು ಪೂರ್ವ ಸಿದ್ಧತೆ ಮಾಡಿಕೊಂಡು ಬರೆದು ಕೊಂಡು ಅಥವಾ ಸಮಯ ಸ್ಫೂರ್ತಿಯಿಂದ ಅಭಿನಯಿಯಸಬಹುದು. ತಮ್ಮ ತರಗತಿಯ ಸಹಪಾಠಿಗಳೊಂದಿಗೆ ಅಥವಾ ಶಾಲೆಯ ತರ ತರಗತಿಗಳ ವಿದ್ಯಾರ್ಥಿಗಳೊಂದಿಗೆ ಮಾಡಬಹುದು. ಸಾಧ್ಯವಾದರೆ, ವಿದ್ಯಾರ್ಥಿಗಳ ಪ್ರದರ್ಶನವನ್ನು ಫೋಟೋ, ಧ್ವನಿ ಮುದ್ರಣ ಅಥವಾ ದೃಶ್ಯಮುದ್ರಣದಲ್ಲಿ ಸೆರೆ ಹಿಡಿಯಬಹುದು.

ಪಾತ್ರಾಭಿನಯ ಕುರಿತು ಹೆಚ್ಚಿನ ಮಾಹಿತಿಗಾಗಿ, 'ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ' ಎನ್ನುವ ಕೀ ಸಂಪನ್ಮೂಲ ಓದಿ.

Video: Storytelling, songs, role play and drama

**ಚಿಂತನೆಗೊಂದು ಕ್ಷಣ...**

ಮೇಲೆ ಹೇಳಿದ ಮುಂದುವರಿಕೆ ಚಟುವಟಿಕೆಗಳನ್ನು ಗಮನಿಸಿ.

- ಪ್ರತೀ ಚಟುವಟಿಕೆಯಲ್ಲಿಯೂ ಮಾತನಾಡುವುದು, ಆಲಿಸುವಿಕೆ, ಓದು ಮತ್ತು ಬರವಣಿಗೆ ಒಳಗೊಂಡಿದೆಯೇ ಎಂದು ಪರಿಶೀಲಿಸಿ, ಒಳಗೊಂಡಿರುವ ಕೌಶಲ ಅಥವಾ ಯಾವುದೇ ಕೌಶಲಗಳ ಕೂಡಿಕೆ (combination) ಇದ್ದರೆ ಅದನ್ನು/ಅವುಗಳನ್ನು ಗುರುತಿಸಿ ಮಾ, ಆ, ಓ ಅಥವಾ ಬ ಎಂದು ಬರೆಯಿರಿ.
- ಈ ಚಟುವಟಿಕೆಗಳಲ್ಲಿ ಇನ್ಯಾವ ಕೌಶಲಗಳು ಅಡಕವಾಗಿವೆ?

## 3 ಶಾಲೆಯ ಸುತ್ತ ಮುತ್ತಲಿನ ಸ್ಥಳೀಯ ಸಂಪನ್ಮೂಲಗಳು

ಶಾಲೆಯ ಸುತ್ತಮುತ್ತಲಿನ ಪರಿಸರದಲ್ಲಿ ಭಾಷೆ ಮತ್ತು ಸಾಕ್ಷರತೆಗೆ ಸಂಬಂಧಿಸಿದ ಅನೇಕ ಕಲಿಕಾ ಅವಕಾಶಗಳನ್ನು ಕಾಣಲು ಸಾಧ್ಯವಿದೆ.

### ಪ್ರಸಂಗ ಅಧ್ಯಯನ 2: ಶಾಲೆಗೆ ಪ್ರಯಾಣ

*ಮಣಿಯವರು, ಉಡುಪಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 4 ಮತ್ತು 5 ನೇ ತರಗತಿಯ ಶಿಕ್ಷಕರು. ಅವರ ತರಗತಿಯಲ್ಲಿ ಮಾತು-ಸಂಬಂಧಿತ ಚಟುವಟಿಕೆಗಳಿಗಾಗಿ, ವಿದ್ಯಾರ್ಥಿಗಳ ಶಾಲೆಗೆ ಪ್ರಯಾಣವನ್ನು ಬಳಸಿಕೊಂಡ ರೀತಿಯನ್ನು ವಿವರಿಸಿದ್ದಾರೆ.*

ನನ್ನ *ದೈನಂದಿನ* ಶಾಲಾ ಪ್ರಯಾಣ ಸಾಮಾನ್ಯವಾಗಿ ಇರುವ ರೀತಿಯನ್ನು ವಿವರಿಸಿ, *ಶಾಲಾ ಪ್ರಯಾಣದ* ವಿಷಯವನ್ನು ನಾನು ಅವರಿಗೆ ಪರಿಚಯಿಸಿದೆ. ಸಾಕಷ್ಟು ಆಸಕ್ತಿದಾಯಕ ವಿಷಯಗಳನ್ನು ಹೇಳಲೇಬೇಕೆಂದುಕೊಂ*ಡಿದ್ದರಿಂದ,* ಹಿಂದಿನ ರಾತ್ರಿಯೇ ಏನು ಹೇಳಬೇಕೆಂದು ಯೋಚಿಸಿ, *ಟಿಪ್ಪಣಿ* ಮಾಡಿಕೊಂಡು, ಸ್ವಲ್ಪ ಅಭ್ಯಾಸವನ್ನೂ ಮಾಡಿಕೊಂಡಿದ್ದೆ. ತರಗತಿಯಲ್ಲಿ ನಿಧಾನವಾಗಿ, ಸ್ಪಷ್ಟವಾಗಿ, *ಮಾತಿನಲ್ಲಿ ನನಗೆ ಸಾಧ್ಯವಾದಷ್ಟು* ಭಾವ *ತುಂಬಿಸಿ,* ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವ ಮೊದಲು ಅರೆ ಕ್ಷಣ ನಿಲ್ಲಿಸಿ, ಎಲ್ಲರೂ ನನ್ನ ಜೊತೆ

ಇದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಂಡು ಮಾತನಾಡಿದೆ.

ನಾನು ಎಲ್ಲಿಂದ ಬರುತ್ತೇನೆ, ಎಷ್ಟು ಹೊತ್ತಿಗೆ ಮನೆ ಬಿಟ್ಟೆ, ನನ್ನ ಪ್ರಯಾಣದ ಸಮಯ, ನಾನು ಪ್ರಯಾಣಿಸುವ ರೀತಿ, ಹಾದುಹೋಗುವ ಗುರುತಾದ ಸ್ಥಳಗಳು, ನನ್ನನ್ನು ಆಕರ್ಷಿಸಿದ ಸಂಗತಿಗಳು, ಯಾವಾಗಲೂ ನೋಡುವ ವ್ಯಕ್ತಿಗಳು, ನಾನು ಮಾತನಾಡಿಸುವ ವ್ಯಕ್ತಿಗಳು ಮತ್ತು ಅವರೊಡನೆ ನಾನು ಬಳಸುವ ಭಾಷೆ - ಇವೆಲ್ಲವನ್ನೂ ಹೇಳಿದೆ. ಬದಲಾಗುವ ಋತುಮಾನಗಳು ನನ್ನ ಪ್ರಯಾಣದ ಮೇಲೆ ಬೀರುವ ಪರಿಣಾಮ, ಪ್ರಯಾಣದ ರೀತಿಯಲ್ಲಿನ ಬದಲಾವಣೆ, ದೃಶ್ಯಾವಳಿಗಳಲ್ಲಿನ ಬದಲಾವಣೆಗಳನ್ನು ಹೇಳಿ ನನ್ನ ಮಾತು ಮುಗಿಸಿದೆ.

ನಂತರ, ಅವರಿಗೆ ಅವರ ಶಾಲಾ ಪ್ರಯಾಣದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಲು ಅವಕಾಶ ಕೊಟ್ಟೆ. ಮಾರನೇ ದಿನ ಶಾಲೆಗೆ ಬರುವಾಗ ಪ್ರತಿಯೊಬ್ಬರೂ ಶಾಲೆಗೆ ಬರುವ ದಾರಿಯಲ್ಲಿ ಎಲ್ಲದಕ್ಕೂ ಲಕ್ಷ್ಯ ನೀಡುವಂತೆ ಹೇಳಿದೆ.

ಮಾರನೇ ದಿನ,ತರಗತಿಯ ಮಕ್ಕಳನ್ನು ನಾಲ್ಕು ಜನರ ಗುಂಪುಗಳಾಗಿ ಮಾಡಿ, ಒಬ್ಬರು ಮತ್ತೊಬ್ಬರಿಗೆ ತಮ್ಮ ಶಾಲಾ ಪ್ರಯಾಣ ಕುರಿತ ವಿವರಗಳನ್ನು ಹಂಚಿಕೊಳ್ಳಲು ಸೂಚಿಸಿದೆ. ಆ ನಿಟ್ಟಿನಲ್ಲಿ, ಸೂಚಕಗಳಾಗಿ ಕೆಳಗಿನ ಪ್ರಶ್ನೆಗಳನ್ನು ಬಳಸಬಹುದೆಂದು ತಿಳಿಸಿದೆ

- ನಿನ್ನ ಪ್ರಯಾಣ ಎಲ್ಲಿ ಪ್ರಾರಂಭವಾಯಿತು?
- ಪ್ರಯಾಣ ಹೇಗೆ ಮಾಡಿದ್ದು? (ಉದಾ: ನಡಿಗೆ, ಸೈಕಲ್, ಬಸ್ ಇತ್ಯಾದಿ)
- ಪ್ರಯಾಣದ ಸಮಯವೆಷ್ಟು? ಬೇರೆ ಬೇರೆ ಋತುಗಳಲ್ಲಿ (ಉದಾ: ಮಳೆಗಾಲ, ಚಳಿಗಾಲ) ಸಮಯ ಹೆಚ್ಚು ಕಡಿಮೆಯಾಗುತ್ತದೆಯೆ?
- ದಾರಿಯಲ್ಲಿ ಸಿಗುವ ಯಾವ ಜಾಗಗಳು ನಿನಗೆ ಪ್ರಿಯವಾದದ್ದು?
- ದಾರಿಯಲ್ಲಿ ಸಾಮಾನ್ಯವಾಗಿ ಯಾರು ಯಾರನ್ನು ನೋಡುತ್ತೀಯಾ?
- ಯಾರ ಜೊತೆ ಮಾತನಾಡುತ್ತೀಯ? ಅವರ ಜೊತೆ ಯಾವ ಭಾಷೆಯಲ್ಲಿ ಮಾತನಾಡುತ್ತೀಯ?

ಮಾಹಿತಿ ಸಾಕಷ್ಟು ಇದ್ದು ಮನೆ ಭಾಷೆ ಬಳಸುವವರಿಗೂ, ಶಾಲೆ ಭಾಷೆ ಬಳಸುವವರಿಗೂ, ಅರ್ಥಾತ್ ತರಗತಿಯಲ್ಲಿ ಎಲ್ಲರಿಗೂ ಹೇಳಲು ವಿಷಯ ಬೇಕಾದಷ್ಟು ಇತ್ತು,

ನಂತರ ಎಲ್ಲರೂ ಒಟ್ಟು ಸೇರಿ ಯಾರು ಬಹಳ ದೂರದಿಂದ ಶಾಲೆಗೆ ಬರುತ್ತಾರೆ, ಯಾರು ಹೆಚ್ಚು ಜನರ ಜೊತೆ ಮಾತನಾಡುತ್ತಾರೆ ಮತ್ತು ಯಾರು ಯಾರೊಟ್ಟಿಗೆ ಶಾಲೆಗೆ ಬರುತ್ತಾರೆ ಎಂದು ತಿಳಿದು ಕೊಂಡೆವು.

**ಚಿಂತನೆಗೊಂದು ಕ್ಷಣ**

- ಗುಂಪು ಚರ್ಚೆಗೆ ಮಣಿಯವರ ವಿದ್ಯಾರ್ಥಿಗಳನ್ನು ಯಾವ ರೀತಿಗಳ ಗುಂಪುಗಳಾಗಿ ರಚಿಸಬಹುದು?
- ಚರ್ಚೆಯ ನಂತರ ಯಾವ ರೀತಿಯ ಚಟುವಟಿಕೆಗಳನ್ನು ಮಾಡಿಸಬಹುದು?

ಗುಂಪುಗಳನ್ನು ಅವರು ವಾಸಿಸುವ ಜಾಗಗಳಿಗೆ ಅಥವಾ ಒಟ್ಟಿಗೆ ಪ್ರಯಾಣ ಮಾಡುವುವರ ಅನುಗುಣವಾಗಿ ಅಥವಾ ನಿರ್ದಿಷ್ಟ ಮಾದರಿಯಿಲ್ಲದಿರುವ (random) ಗುಂಪುಗಳನ್ನಾಗಿ ಮಾಡಬಹುದು.

ಮುಂದುವರಿಕೆ ಚಟುವಟಿಕೆಯಾಗಿ ಕೆಳಗಿನ ಸಲಹೆಗಳನ್ನು ಕೊಟ್ಟಿದೆ:

- ದಾರಿಯಲ್ಲಿ ಅವರು ನೋಡಿದ್ದರ ಚಿತ್ರ ರಚಿಸುವುದು
- ಅವರ ಪ್ರಯಾಣದ ದಾರಿಯ ರೇಖಾ ನಕ್ಷೆ ಅಥವಾ ಟಿಪ್ಪಣಿಗಳಿರುವ ನಕ್ಷೆ ತಯಾರಿಸುವುದು
- ಪ್ರಯಾಣ ಕುರಿತಾದ ಲೇಖನ

- ತರಗತಿಯಲ್ಲಿರುವ ಮಕ್ಕಳ ಶಾಲಾ ಪ್ರಯಾಣದಲ್ಲಿರುವ ಸಾಮ್ಯತೆ ವ್ಯತ್ಯಾಸಗಳನ್ನು ಕಂಡುಹಿಡಿಯುವ ತರಗತಿ ಪ್ರಾಜೆಕ್ಟ್ ಕೈಗೊಳ್ಳಬಹುದು

ಕೆಲವು ವಾರ ಅಥವಾ ತಿಂಗಳುಗಳ ನಂತರ ವಿದ್ಯಾರ್ಥಿಗಳನ್ನು ಅವರ ಪ್ರಯಾಣದಲ್ಲಿ ಆಗಿರುವ ಬದಲಾವಣೆಗಳ ಕುರಿತು ಮಾತನಾಡುವುದರ ಮೂಲಕ ಈ ಚಟುವಟಿಕೆಯನ್ನು ಮುಂದುವರೆಸಬಹುದು/ವಿಸ್ತರಿಸಬಹುದು. ಉದಾಹರಣೆಗೆ, ರಸ್ತೆ ದುರಸ್ತಿಯಾಗಿರಬಹುದು, ಹೊಸ ಕಟ್ಟಡಗಳು ಮೇಲೆದ್ದಿರಬಹುದು, ಅಥವಾ ಅವರು ಭೇಟಿಯಾಗುವ ಜನರು ಬದಲಾಗಿರಬಹುದು. ಜೊತೆಗೆ, ಬೆಳೆ ಕಟಾವಾಗಿರಬಹುದು, ಆ ಕಾಲದ ಹಣ್ಣುಗಳು ಬಿಟ್ಟಿರಬಹುದು ಅಥವಾ ಕೆಲವೆಡೆ ಅವರು ನಡೆಯುವ ಹಾದಿಯೇ ಕೊಚ್ಚಿಹೋಗಿ ಬದಲಾಗಿರಬಹುದು.

## 4 ಸಾರಾಂಶ

ಸಿದ್ಧವಾಗಿ ಸಿಗುವ ಸಂಪನ್ಮೂಲಗಳನ್ನು, ಶಾಲಾ ಪಠ್ಯಪುಸ್ತಕದಲ್ಲಿನ ಭಾಷೆ ಮತ್ತು ಸಾಕ್ಷರತೆ ಚಟುವಟಿಕೆಗಳಿಗೆ ಪೂರಕವಾಗಿ ಮತ್ತು ಅದಕ್ಕೆ ಪುಷ್ಟಿ ಕೊಡುವ ರೀತಿಯಲ್ಲಿ ಬಳಸಬಹುದಾದ ರೀತಿಗಳನ್ನು ಈ ಘಟಕ ತೋರಿಸಿದೆ. ಮುದ್ರಿತ ಸಾಮಗ್ರಿಯಾಗಿರಬಹುದು, ಮಾತಾಗಿರಬಹುದು ಅಥವಾ ಜಾಗಗಳಾಗಿರಬಹುದು - ಈ ಸಂಪನ್ಮೂಲಗಳೆಲ್ಲವೂ ನಿಮ್ಮ ವಿದ್ಯಾರ್ಥಿಗಳ ಅರ್ಥಪೂರ್ಣ ಮಾತು, ಆಲಿಸುವಿಕೆ, ಓದು ಮತ್ತು ಬರಹಕ್ಕೆ ಪ್ರೇರಣೆ ನೀಡುವ ಅವಕಾಶಗಳಾಗಬಹುದು. ಕಾಲಾನುಕ್ರಮದಲ್ಲಿ, ಸ್ಥಳೀಯ ಸಂಪನ್ಮೂಲಗಳ ಬಳಕೆ ಹೆಚ್ಚಿಸಿದಂತೆಲ್ಲ ನಿಮ್ಮ ವಿದ್ಯಾರ್ಥಿಗಳು ಶಾಲೆಯ ಹೊರಗೆ ಮುಖಾಮುಖಿಯಾಗುವ ವಿಶ್ವಾಸಾರ್ಹ ಮತ್ತು ಅರ್ಥಪೂರ್ಣ ಪಠ್ಯಗಳಂತಹ ಸಂಪನ್ಮೂಲಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವುದು ಖಂಡಿತವಾಗಿ ಸಾಧ್ಯವಾಗುತ್ತದೆ.

## ಸಂಪನ್ಮೂಲಗಳು

### ಸಂಪನ್ಮೂಲ 1: ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು

ಬೋಧನೆಯಲ್ಲಿ ಬರೀ ಪಠ್ಯಪುಸ್ತಕವಷ್ಟೇ ಅಲ್ಲದೇ, ಅನೇಕ ಕಲಿಕಾ ಸಂಪನ್ಮೂಲಗಳನ್ನು ಬಳಸಬಹುದು. ಪಂಚೇಂದ್ರಿಯಗಳಲ್ಲಿ (ನೋಟ, ಶಬ್ಧ, ವಾಸನೆ, ರುಚಿ, ಸ್ಪರ್ಷ) ಎಲ್ಲವನ್ನೂ ಬಳಸಿ ಕಲಿಯುವ ಅವಕಾಶಗಳನ್ನು ನೀಡಿದರೆ ವಿವಿಧ ರೀತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳೆಲ್ಲರಿಗೂ ನೀವು ಮಾಡುವುದು ಇಷ್ಟವಾಗುತ್ತದೆ. ತರಗತಿಯಲ್ಲಿ ಬಳಸಲಾಗುವ ಹಾಗೂ ನಿಮ್ಮ ವಿದ್ಯಾರ್ಥಿಗಳ ಕಲಿಕೆಗೆ ಬೆಂಬಲವಾಗುವ ಸಂಪನ್ಮೂಲಗಳು ನಿಮ್ಮ ಸುತ್ತಮುತ್ತಲೂ ಇವೆ. ಕಡಿಮೆ ವೆಚ್ಚದಲ್ಲಿ ಅಥವಾ ಖರ್ಚಿಲ್ಲದೆಯೇ ಕಲಿಕಾ ಸಂಪನ್ಮೂಲಗಳನ್ನು ಯಾವ ಶಾಲೆಯಾದರೂ ಸ್ವಂತವಾಗಿ ಸೃಷ್ಟಿಸಬಹುದು. ಸ್ಥಳೀಯ ಸಾಮಗ್ರಿಗಳನ್ನು ಬಳಸುವುದರಿಂದ, ಪಠ್ಯಕ್ರಮ ಮತ್ತು ವಿದ್ಯಾರ್ಥಿಗಳ ನಡುವೆ ಸಂಬಂಧಗಳು ಬೆಸೆದುಕೊಳ್ಳುತ್ತವೆ.

ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ತಮ್ಮ ಕಾರ್ಯವ್ಯಾಪ್ತಿಯಲ್ಲಿ ವ್ಯಾಪಕ ಹರಹುಳ್ಳ ವ್ಯಕ್ತಿಗಳಿರುತ್ತಾರೆ; ಧಂಡಿಯಾದ ನಿಸರ್ಗ ಸಂಪನ್ಮೂಲಗಳಿರುತ್ತವೆ. ಇವು ನಿಮ್ಮ ಸಮುದಾಯದೊಡನೆ ಕೊಂಡಿಗಳನ್ನು ಸೃಷ್ಟಿಸಲು, ಅದರ ಮೌಲ್ಯಗಳನ್ನು ಎತ್ತಿಹಿಡಿಯಲು, ಪರಿಸರದ ಸಮೃದ್ಧತೆ ಮತ್ತು ವೈವಿಧ್ಯತೆಯನ್ನು ವಿದ್ಯಾರ್ಥಿಗಳು ಗಮನಿಸುವಂತೆ ಪ್ರಚೋದಿಸಲು. ಎಲ್ಲಕ್ಕಿಂತ ಮಿಗಿಲಾಗಿ ವಿದ್ಯಾರ್ಥಿಗಳ ಕಲಿಕೆಯ ಸಮಗ್ರ ದೃಷ್ಟಿಕೋನದೆಡೆಗೆ ಶ್ರಮಿಸಲು ಅಂದರೆ ಶಾಲೆಯ ಒಳಗೆ ಮತ್ತು ಹೊರಗೆ ಕಲಿಯುವಂತೆ ಮಾಡುವಲ್ಲಿ ನಿಮಗೆ ಸಹಾಯ ಹಸ್ತ ನೀಡುತ್ತದೆ.

### ತರಗತಿಯಲ್ಲಿರುವುದನ್ನು ಪ್ರವರ್ಧಮಾನಕ್ಕೆ ತರುವುದು

ಜನರು ತಮ್ಮ ಮನೆಯನ್ನು ಸಾಧ್ಯವಾದಷ್ಟೂ ಆಕರ್ಷಣೀಯವಾಗಿ ಮಾಡಲು ಶ್ರಮಿಸುತ್ತಾರೆ. ನಿಮ್ಮ ವಿದ್ಯಾರ್ಥಿಗಳ ಕಲಿಕಾ ಪರಿಸರದ ಬಗ್ಗೆ ನಿಮಗಿರುವ ನಿರೀಕ್ಷೆಗಳೇನು ಎನ್ನುವುದನ್ನು ಕುರಿತು ಚಿಂತಿಸುವುದು ಒಳ್ಳೆಯದು. ತರಗತಿ ಮತ್ತು ಶಾಲೆಯನ್ನು ಕಲಿಕೆಗೆ ಆಕರ್ಷಣೀಯವಾಗಿಸಲು ನೀವು ಏನೇ ಮಾಡಿದರೂ ಅದು ಖಂಡಿತವಾಗಿ ವಿದ್ಯಾರ್ಥಿಗಳ ಮೇಲೆ ಧನಾತ್ಮಕ ಪರಿಣಾಮವನ್ನು ಬೀರುತ್ತದೆ. ತರಗತಿಯನ್ನು ಆಸಕ್ತಿದಾಯಕ ಹಾಗೂ ಆಕರ್ಷಣೆಯ ಮಾಡಲು ಬೇಕಾದಷ್ಟು ದಾರಿಗಳಿವೆ.

ಉದಾಹರಣೆಗೆ:

ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು

- ಹಳೇ ನಿಯತಕಾಲಿಕಗಳು ಮತ್ತು ಕಿರುಪುಸ್ತಿಕೆಗಳನ್ನು ಬಳಸಿ ಪೋಸ್ಟರ್‌ಗಳನ್ನು ತಯಾರಿಸಬಹುದು
- ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ವಸ್ತುಗಳು ಮತ್ತು ಉಪಕರಣಗಳನ್ನು ತರುವುದು
- ನಿಮ್ಮ ವಿದ್ಯಾರ್ಥಿಗಳ ಕೆಲಸವನ್ನು ಪ್ರದರ್ಶಿಸುವುದು
- ವಿದ್ಯಾರ್ಥಿಗಳ ಕುತೂಹಲ ಕೆರಳಿಸಲು ತರಗತಿಯಲ್ಲಿನ ಪ್ರದರ್ಶನ ಸಾಮಗ್ರಿಗಳನ್ನು ಆಗಿಂದ್ದಾಗ್ಗೆ ಬದಲಿಸಿ ಹೊಸ ಕಲಿಕೆಗೆ ಸ್ಪೂರ್ತಿ ನೀಡುವುದು.

## ನಿಮ್ಮ ತರಗತಿಯಲ್ಲಿ ಸ್ಥಳೀಯ ತಜ್ಞರ ಜ್ಞಾನದ ಉಪಯೋಗ ಪಡೆಯುವುದು

ಗಣಿತದಲ್ಲಿ ನೀವು ಹಣ ಅಥವಾ ಪರಿಮಾಣಗಳ ಮೇಲೆ ಕೆಲಸ ಮಾಡುತ್ತಿದ್ದರೆ, ಮಾರುಕಟ್ಟೆಯ ವ್ಯಾಪಾರಿ ಅಥವಾ ದರ್ಜಿಗಳನ್ನು, ಅವರ ಕೆಲಸದಲ್ಲಿ ಅವರು ಗಣಿತವನ್ನು ಹೇಗೆ ಬಳಸುತ್ತಿದ್ದಾರೆ ಎಂದು ವಿವರಿಸಲು ತರಗತಿಗೆ ಬರಮಾಡಿಕೊಳ್ಳಬಹುದು. ಪರ್ಯಾಯವಾಗಿ, ಕಲೆಯಲ್ಲಿ ಆಕೃತಿ ಮತ್ತು ವಿನ್ಯಾಸಗಳ ಶೋಧ ಕೈಗೆತ್ತಿಕೊಂಡಿದ್ದರೆ, ವಿವಿಧ ಆಕೃತಿ, ವಿನ್ಯಾಸ, ಪರಂಪರೆ ಮತ್ತು ತಂತ್ರಗಳನ್ನು ವಿವರಿಸಲು ಮೆಹೆಂದಿ ಹಾಕುವವರನ್ನು ಶಾಲೆಗೆ ಕರೆಸಬಹುದು. ಶೈಕ್ಷಣಿಕ ಉದ್ದೇಶಗಳು ಎಲ್ಲರಿಗೂ ಸ್ಪಷ್ಟವಾಗಿದ್ದು, ಮೀಸಲಾದ ಸಮಯದ ಬಗ್ಗೆ ಸಮನಾದ ನಿರೀಕ್ಷೆ ಇದ್ದಲ್ಲಿ ಅತಿಥಿಗಳನ್ನು ಕರೆಸುವುದು ಫಲಪ್ರದವಾಗುತ್ತದೆ.

ನಿಮಗೆ ಶಾಲೆಯೊಳಗೇ ತಜ್ಞರು ಸಿಗಬಹುದು (ಉದಾಹರಣೆಗೆ - ಅಡಿಗೆಯವರು ಅಥವಾ ಶಾಲಾ ಕಟ್ಟಡದ ಉಸ್ತುವಾರಿ ನೋಡಿಕೊಳ್ಳುವವರು). ಅಡುಗೆಯಲ್ಲಿ ಪರಿಮಾಣದ ಬಗ್ಗೆ ಅಥವಾ ಋತುಮಾನಗಳಿಂದ ಶಾಲೆಯ ಬಯಲು ಅಥವಾ ಕಟ್ಟಡದ ಮೇಲೆ ಆಗುವ ಪರಿಣಾಮಗಳ ಕುರಿತು ಕಲಿಯಲಿಕ್ಕಿದ್ದರೆ, ಇವರನ್ನು ಹಿಂಬಾಲಿಸಿ ಅವರು ಮಾಡುವುದನ್ನು ನೋಡಿ ಕಲಿಯಬಹುದು ಅಥವಾ ಅವರನ್ನು ಸಂದರ್ಶಿಸಿ ಕಲಿಯಬಹುದು.

## ಹೊರಗಿನ ಪರಿಸರವನ್ನು ಉಪಯೋಗಿಸುವುದು

ನಿಮ್ಮ ಪಾಠಗಳಿಗಾಗಿ ಉಪಯೋಗಿಸಲು ತರಗತಿಯ ಹೊರಗೆ ವಿಫುಲವಾದ ಸಂಪನ್ಮೂಲಗಳು ದೊರಕುತ್ತವೆ. ಎಲೆಗಳು, ಜೇಡಗಳು, ಗಿಡಗಳು, ಕೀಟಗಳು, ಕಲ್ಲು ಅಥವಾ ಮರದ ತುಂಡುಗಳಂತಹ ಸಾಮಾನುಗಳನ್ನು ನೀವು ಸಂಗ್ರಹಿಸಬಹುದು (ಅಥವಾ ನಿಮ್ಮ ತರಗತಿಯ ಮಕ್ಕಳಿಗೆ ಸಂಗ್ರಹಿಸಲು ಹೇಳ ಬಹುದು). ಈ ಸಂಪನ್ಮೂಲಗಳನ್ನು ತರಗತಿಯಲ್ಲಿ ಆಕರ್ಷಕವಾಗಿ ಆಸಕ್ತಿ ಹುಟ್ಟಿಸುವಂತೆ ಜೋಡಿಸಿಟ್ಟು ಪ್ರದರ್ಶಿಸಿ ಪಾಠ ಮಾಡುವಾಗ ಸೂಕ್ತ ಸಮಯದಲ್ಲಿ ಅದನ್ನು ಪ್ರಸ್ತಾಪಿಸಬಹುದು. ಇವುಗಳು ಚರ್ಚಾ ವಿಷಯಗಳಾಗಬಹುದು ಅಥವಾ ವಿಂಗಡಣೆಯ ಚಟುವಟಿಕೆ ಅಥವಾ ಸಜೀವ ನಿರ್ಜೀವ ವಸ್ತುಗಳ ಕಲಿಕೆಗೆ ಪ್ರಾಯೋಗಿಕ ವಸ್ತುಗಳಾಗಬಹುದು. ಬಸ್ಸಿನ ವೇಳಾಪಟ್ಟಿ ಅಥವಾ ಕೆಲವು ಜಾಹೀರಾತುಗಳು ನಿಮಗೆ ಸುಲಭವಾಗಿ ಸಿಗುತ್ತವೆ ಮತ್ತು ನಿಮ್ಮ ಸಮುದಾಯಕ್ಕೆ ಅವು ಸೂಕ್ತವಾದದ್ದು ಕೂಡ - ಇವುಗಳನ್ನು ಬಳಸಿಕೊಡು ಪದ ಗುರುತಿಸುವ, ಗುಣಮಟ್ಟದ ಹೋಲಿಕೆಯ ಅಥವಾ ಪ್ರಯಾಣದ ಸಮಯವನ್ನು ಲೆಕ್ಕ ಹಾಕುವಂತಹ ಕಾರ್ಯಗಳನ್ನು ನಿಯೋಜಿಸಿದಾಗ ಈ ಸಾಮಗ್ರಿಗಳು ಕಲಿಕಾ ಸಂಪನ್ಮೂಲಗಳಾಗಿ ಮಾರ್ಪಾಡಾಗುತ್ತವೆ.

ಹೊರಗಿನ ವಸ್ತುಗಳನ್ನೂ ತರಗತಿಯೊಳಗೆ ತರಬಹುದು. ಹೊರಾಂಗಣವೇ ನಿಮಗೆ ವಿಸ್ತರಿಸಿದ ತರಗತಿಯಾಗಬಹುದು. ಹೊರಗೆ ಓಡಾಡಲು ಮತ್ತು ವಿದ್ಯಾರ್ಥಿಗಳೆಲ್ಲರೂ ಸರಾಗವಾಗಿ ನೋಡಲು ಸ್ಥಳಾವಕಾಶವಿರುತ್ತದೆ. ನಿಮ್ಮ ವಿದ್ಯಾರ್ಥಿಗಳನ್ನು ಕಲಿಕೆಗಾಗಿ ಹೊರಗೆ ಕರೆದುಕೊಂಡು ಹೋದಾಗ ಅವರು ಕೆಳಗಿರುವಂತಹ ಚಟುವಟಿಕೆಗಳನ್ನು ಮಾಡಬಹುದು:

- ದೂರವನ್ನು ಊಹಿಸಿ ನಂತರ ಅಳತೆ ಮಾಡುವುದು
- ವೃತ್ತದ ಕೇಂದ್ರದಿಂದ ವೃತ್ತದ ಪ್ರತೀ ಬಿಂದು ಸಮದೂರದಲ್ಲಿರುತ್ತದೆ ಎನ್ನುವುದನ್ನು ಪ್ರಮಾಣೀಕರಿಸುವುದು
- ದಿನದ ಬೇರೆ ಬೇರೆ ಸಮಯದಲ್ಲಿ ಉಂಟಾಗುವ ನೆರಳನ್ನು ಅಳತೆ ಮಾಡುವುದು
- ಸೂಚನೆಗಳನ್ನು, ಫಲಕಗಳನ್ನು ಓದುವುದು
- ಸಂದರ್ಶನ ಮತ್ತು ಸಮೀಕ್ಷೆ ನಡೆಸುವುದು
- ಸೌರ ಫಲಕಗಳನ್ನು ಪತ್ತೆ ಹಚ್ಚುವುದು
- ಬೆಳೆಯ ಬೆಳವಣಿಗೆ ಮತ್ತು ಮಳೆಯನ್ನು ಪರಿವೀಕ್ಷಿಸುವುದು

ಹೊರಗೆ ಆಗುವ ಕಲಿಕೆ ನೈಜವಾಗಿರುತ್ತದೆ ಮತ್ತು ಅವರಿಗೆ ಸ್ವಂತ ಅನುಭವವಾಗುತ್ತದೆ. ಆದ್ದರಿಂದ ಇತರ ಸನ್ನಿವೇಶಗಳಿಗೆ ವರ್ಗಾಯಿಸುವ ಸಾಧ್ಯತೆ ಹೆಚ್ಚುತ್ತದೆ.

ನಿಮ್ಮ ವಿದ್ಯಾರ್ಥಿಗಳ ಕಲಿಕೆಗಾಗಿ, ಶಾಲಾ ಆವರಣದಿಂದ ಹೊರಹೋಗುವಂತಿದ್ದರೆ, ಹೊರಡುವ ಮುಂಚೆ ಶಾಲಾ ಮುಖ್ಯಸ್ಥರಿಂದ ಅನುಮತಿ ಪಡೆದು, ಸಮಯವನ್ನು ನಿಗದಿ ಮಾಡಿಕೊಂಡು, ಎಲ್ಲರ ಸುರಕ್ಷತೆಯನ್ನು ಖಚಿತಪಡಿಸಿಕೊಂಡು, ಮಕ್ಕಳಿಗೆ ನಿಯಮಗಳನ್ನು ಸ್ಪಷ್ಟವಾಗಿ ತಿಳಿಸಿ ಹೊರಡಬೇಕು. ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ಹೊರಡುವ ಮುನ್ನ ಏನನ್ನು ಕಲಿಯಬೇಕೆಂಬುದರ ಬಗ್ಗೆ ಸ್ಪಷ್ಟತೆ ಇರಲಿ.

ಸಂಪನ್ಮೂಲಗಳನ್ನು ಹೊಸ ಉದ್ದೇಶಕ್ಕೆ ಸರಿಹೊಂದಿಸುವುದು

ನಿಮ್ಮ ವಿದ್ಯಾರ್ಥಿಗಳಿಗೆ ಹೆಚ್ಚು ಸೂಕ್ತವಾಗಲು ಈಗಾಗಲೇ ಇರುವ ಸಂಪನ್ಮೂಲವನ್ನು ಹೊಸ ಉದ್ದೇಶಕ್ಕೆ ಸರಿಹೊಂದಿಸಬೇಕಾಗಬಹುದು. ವಿಶೇಷವಾಗಿ ಕಲಿಕೆಯನ್ನು ಎಲ್ಲರಿಗೂ ಸೂಕ್ತವಾಗಿಸಲು ಮಾಡುವ ಬದಲಾವಣೆಗಳು ಸಣ್ಣ ಪುಟ್ಟದಿರಬಹುದು, ಆದರೆ ಭಾರೀ ಪ್ರಮಾಣದ ಪರಿಣಾಮದ ಸಾಧ್ಯತೆ ಇರುತ್ತದೆ. ಉದಾಹರಣೆಗೆ, ನೀವು ಜಾಗ ಅಥವಾ ಜನರ ಹೆಸರನ್ನು ಬದಲಾಯಿಸಬಹುದು ಅಥವಾ ಹಾಡಿನಲ್ಲಿ ಬರುವ ವ್ಯಕ್ತಿಯ ಲಿಂಗ ಬದಲಾವಣೆ ಮಾಡಬಹುದು ಅಥವಾ ಕಥೆಯಲ್ಲಿ ನ್ಯೂನತೆ ಉಳ್ಳ ಮಗುವಿನ ಪಾತ್ರವನ್ನು ಸೇರಿಸಬಹುದು. ಈ ರೀತಿಯಾಗಿ, ಸಂಪನ್ಮೂಲವನ್ನು ಹೆಚ್ಚು ಒಳಗೊಳ್ಳುವ ಸಂಪನ್ಮೂಲವಾಗಿ ಮತ್ತು ನಿಮ್ಮ ತರಗತಿಗೆ ಮತ್ತು ನಿಮ್ಮ ಮಕ್ಕಳ ಕಲಿಕೆಗೆ ಸೂಕ್ತವಾಗಿರುವಂತೆ ಮಾಡಬಹುದು.

ಸಂಪದ್ಭರಿತರಾಗಲು, ನಿಮ್ಮ ಸಹೋದ್ಯೋಗಿಗಳೊಂದಿಗೆ ಕೂಡಿ ಕೆಲಸ ಮಾಡಿ: ಸಂಪನ್ಮೂಲ ಸೃಷ್ಟಿ ಮತ್ತು ಬದಲಾವಣೆಗೆ ಅಗತ್ಯವಿರುವ ವೈವಿಧ್ಯಮಯ ಕೌಶಲಗಳು ನಿಮ್ಮಲ್ಲಿಯೇ ಇರುತ್ತದೆ. ನಿಮ್ಮಲ್ಲಿ ಒಬ್ಬರು ಸಂಗೀತದಲ್ಲಿ ನಿಪುಣರಾಗಿರಬಹುದು, ಇನ್ನೊಬ್ಬರಿಗೆ ಬೊಂಬೆ ಮಾಡುವ ಕೌಶಲವಿರಬಹುದು ಅಥವಾ ಹೊರಗೆ ವಿಜ್ಞಾನ ಕಲಿಯುವುದನ್ನು ಆಯೋಜಿಸಲು ತಿಳಿದಿರಬಹುದು. ತರಗತಿಯಲ್ಲಿ ಬಳಸುವ ಸಂಪನ್ಮೂಲಗಳನ್ನು ನಿಮ್ಮ ಸಹೋದ್ಯೋಗಿಗಳು ಪರಸ್ಪರ ಹಂಚಿಕೊಂಡು, ಎಲ್ಲರೂ ಸೇರಿ ಶಾಲೆಯ ಎಲ್ಲ ಕ್ಷೇತ್ರಗಳಲ್ಲಿಯೂ ಸಂಪದ್ಭರಿತ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಸಹಾಯಮಾಡಬಹುದು.

## ’ಚ್ಚುವರಿ ಸಂಪನ್ಮೂಲಗಳು

- Gillis, C. (1991) *The Community as Classroom: Integrating School and Community Through Language Arts*. Portsmouth, NH: Boynton/Cook.This activity-filled book suggests ways that students can develop their language skills through community-based learning experiences.
- Kenner, C. (2000) *Home Pages: Literacy Links for Bilingual Children*. London: Trentham Books.
- National Council of Teachers in English (NCTE) (undated) ‘Supporting linguistically and culturally diverse learners in English education’ (online). Available from: http://www.ncte.org/cee/positions/diverselearnersinee.
- Prior, J. and Gerard, M.R. (2004) *Environmental Print in the Classroom: Meaningful Connections for Learning to Read*. Newark, DE: International Reading Association.
- Siegel, M. (2006) ‘Rereading the signs: multimodal transformations in the field of literacy education’, *Language Arts*, vol. 84, no. 1, pp. 65–77.
- Moll, L.C., Amanti, C., Neff, D. and Gonzalez, N. (1992). ‘Funds of knowledge for teaching: using a qualitative approach to connect homes and classrooms’, *Theory into Practice*, no. 31, pp. 132–41.
- AzimPremji Foundation’s research studies: http://www.azimpremjifoundation.org/Research_Studies

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ

Center for Ecoliteracy (undated) ‘Teach: place-based learning’ (online). Available from: http://www.ecoliteracy.org/strategies/place-based-learning (accessed 18 November 2014).

Promise of Place (undated) ‘Research & evaluation’ (online).Available from: http://www.promiseofplace.org/Research_Evaluation (accessed 18 November 2014).

## Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 1:  various images made available in Flickr under http://creativecommons.org/licenses/by/4.0/.

Figure 2: © Peter Grima in Flickr made available under https://creativecommons.org/licenses/by-sa/2.0/deed.en_GB.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.